5388(6282) ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಬೇಲೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ಜಿಲ್ಲೆ ಬೇಲೂರು ಪಟ್ಟಣಕ್ಕೆ ಅಗ್ನಿಶಾಮಕ ಠಾಣೆ ಮಂಜೂರಾಗಿರುವುದು ನಿಜವೆ;

ಆ) ಹಾಗಿದ್ದಲ್ಲಿ ಪ್ರಾರಂಭಿಸದಿರಲು ಕಾರಣಗಳೇನು;

ಇ) ನಿವೇಶನ ನೀಡಿದ್ದರೂ ಕಟ್ಟಡ ಮಂಜೂರಾತಿ ಆಗದಿರಲು ಕಾರಣವೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಹೌದು

ಆ) ಅಗ್ನಿಶಾಮಕ ಠಾಣೆಗೆ ಅಗತ್ಯವಾಗಿಬೇಕಾದ ಕಟ್ಟಡ, ಸಿಬ್ಬಂದಿ, ವಾಹನ ಹಾಗೂ ಉಪಕರಣಗಳನ್ನು ಸಿದ್ದಗೊಳಿಸಲಾಗುತ್ತಿದೆ. ಖಾಯಂ ಅಗ್ನಿಶಾಮಕ ಠಾಣೆ ಕಟ್ಟಡ ನಿರ್ಮಾಣಗೊಂಡ ಕೂಡಲೇ ಬೇಲೂರಿನಲ್ಲಿ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲಾಗುವುದು.

ಇ) ಬೇಲೂರು ಪಟ್ಟಣದಲ್ಲಿ ಖಾಯಂ ಅಗ್ನಿಶಾಮಕ ಠಾಣೆ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯ ವತಿಯಿಂದ ನಿರ್ಮಿಸಲಗುತ್ತಿದೆ.

5389(5786) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಬಂದರು ಅಭಿವೃದ್ಧಿ ಕಾರ್ಯಗಳಿಗಾಗಿ ಒಳನಾಡು ಹಾಗೂ ಹೊರನಾಡುಗಳಲ್ಲಿ ವಶಪಡಿಸಿಕೊಂಡ ಜಮೀನು ಎಷ್ಟು? (ಬಂದರುವಾರು ವಿವರ ನೀಡುವುದು)

ಆ) ವಶಪಡಿಸಿಕೊಂಡ ಜಮೀನಿನಲ್ಲಿ ಬಂದರು ಕಾರ್ಯಕ್ಕೆ ಉಪಯೋಗಿಸಿಕೊಂಡು ಉಳಿದ ಜಮೀನು ಎಷ್ಟು? (ಬಂದರುವಾರು ವಿವರ ನೀಡುವುದು)

ಇ) ಈ ಉಳಿಕೆ ಜಮೀನನ್ನು 10 ವರ್ಷಗಳಿಂದೀಚಿಗೆ ಖಾಸಗಿ ಒಡೆತನಕ್ಕೆ ನೀಡಲಾದ ಜಮೀನು ಎಷ್ಟು? (ಬಂದರುವಾರು ವಿವರ ಹಾಗೂ ಪಡೆಯಲಾದ ವ್ಯಕ್ತಿ ಮತ್ತು ಸಂಸ್ಥೆಯ ಪೂರ್ಣ ವಿವರದ ವಿಳಾಸ ನೀಡುವುದು)

ಈ) ಸಮುದ್ರದ ಬಂದರು ಹಾಗೂ ಒಳನಾಡಿನಲ್ಲಿ ಬಂದರುಗಳನ್ನು ಅಭಿವೃದ್ಧಿ ಪಡಿಸದೇ, ಬಂದರಿಗೆ ಮೀಸಲಿರಿಸಿದ ಜಮೀನನ್ನು ಖಾಸಗಿಯವರಿಗೆ ನೀಡಿ ಮೀನುಗಾರಿಕಾ ವೃತ್ತಿಗೆ ಬಲವಾದ ಪೆಟ್ಟುನೀಡಲು ಕಾರಣವೇನು? (ಸಮುದ್ರ ಬಂದರು ಮತ್ತು ಒಳನಾಡು ಬಂದರಿನ ವ್ಯಾಪ್ತಿ ಸೇರಿ ವಿವರ ನೀಡುವುದು)

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಕರ್ನಾಟಕ ರಾಜ್ಯದ 10 ಚಿಕ್ಕ ವಾಣಿಜ್ಯ ಬಂದರುಗಳಲ್ಲಿ ಒಟ್ಟು 165.64 ಎಕರೆ ಬಂದರು ಭೂಮಿಯನ್ನು ಬಂದರು ಅಭಿವೃದ್ಧಿ ಕಾರ್ಯಗಳಿಗಾಗಿ ವಶಪಡಿಸಿಕೊಂಡಿದ್ದು ಅವುಗಳ ವಿವರಗಳು ಈ ಕೆಳಗಿನಂತೆ ಇರುತ್ತದೆ.

1)	ಕಾರವಾರ	113.33 ಎಕರೆ
2)	ಬೇಲೆಕೇರಿ	7.09 ಎಕರೆ
3)	ತದಡಿ	–
4)	ಹೊನ್ನಾವರ	36.50 ಎಕರೆ
5)	ಭಟ್ಕಳ	–